# ಜಿಲ್ಲಾ ಪಂಚಾಯಿತಿ, ಹಾಸನ.

ಸಂಖ್ಯೆ: ಜಿ.ಪಂಹಾ/ಪ.ಶಾ/ 43/2011-12

ದಿನಾಂಕ: 05-11-2011

## ಮುಂದೂಡಿದ ಸಭಾಹ್ವಾನ ಪತ್ರ

ಶ್ರೀಮತಿ ಸುಲೋಚನಾ ರಾಮಕೃಷ್ಣ, ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ, ಇವರ ಅಧ್ಯಕ್ಷತೆಯಲ್ಲಿ **ದಿನಾಂಕ: 04-11-2011ರಂದು ಶುಕ್ರವಾರ ಅಪರಾಹ್ನ: 12-30 ಗಂಟೆಗೆ ಕರೆಯಲಾಗಿದ್ದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯನ್ನು ಅನಿವಾರ್ಯ ಕಾರಣಗಳಿಂದ ದಿನಾಂಕ: 09-11-2011ರಂದು ಬುಧವಾರ ಬೆಳಿಗ್ಗೆ:11-00ಗಂಟೆಗೆ** ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯನ್ನು ಕರೆಯಲಾಗಿದೆ. ಸದರಿ ಸಭೆಗೆ ಸದಸ್ಯರುಗಳು ಸಕಾಲಕ್ಕೆ ಹಾಜರಾಗಬೇಕೆಂದು ಕೋರಿದೆ.

ಸದಸ್ಯ ಕಾರ್ಯದರ್ಶಿ ಹಾಗೂ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯಿತಿ, ಹಾಸನ.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ಹಾಸನ ಟೌನ್‌ನಲ್ಲಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ (ಹೆಚ್ಚುವರಿ) ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.
2. ಹಾಸನ ಟೌನ್‌ನಲ್ಲಿರುವ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ (ಹೆಚ್ಚುವರಿ) ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.
3. ಬೇಲೂರು ಟೌನ್‌ನ ಮೆಟ್ರಿಕ್ ನಂತರದ ಕಾಲೇಜು ಬಾಲಕರ ವಿದ್ಯಾರ್ಥಿನಿಲಯಕ್ಕೆ ಬಾಡಿಗೆ ಪಡೆದಿರುವ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಕುರಿತು.
4. ಸಕಲೇಶಪುರ ತಾಲ್ಲೂಕಿನ ಬಾಗೆ ಅರಸುನಗರದಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಕುರಿತು
5. 2008-09ನೇ ಸಾಲಿನಲ್ಲಿ ರಾಜ್ಯವಲಯ ಕಾರ್ಯಕ್ರಮದಡಿ ಮಂಜೂರಾಗಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಅರಕಲಗೂಡು ಈ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಕುರಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

ಪ್ರತಿಯನ್ನು:

1. ಶ್ರೀಮತಿ ಸುಲೋಚನಾ ರಾಮಕೃಷ್ಣ, ಅಧ್ಯಕ್ಷರು, ಸಾಮಾನ್ಯ ಸ್ಥಾಯಿ ಸಮಿತಿ
2. ಶ್ರೀಮತಿ ಕುಸುಮ ಬಾಲಕೃಷ್ಣ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
3. ಶ್ರೀಮತಿ ಜಿ.ಟಿ. ಇಂದಿರಾಧರ್ಮಪ್ಪ, ಸದಸ್ಯರು, ಸಾಮಾನ್ಯ ನ್ಯಾಯ ಸ್ಥಾಯಿ ಸಮಿತಿ

4. ಶ್ರೀ ದೇವೇಗೌಡ ಉರುಫ್ ಪಾಪಣ್ಣಿ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
5. ಶ್ರೀ ಬಿಳಿಚೌಡಯ್ಯ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
6. ಶ್ರೀ ಬಿ.ಎನ್.ರಾಮಚಂದ್ರ (ಭೈರಮುಡಿ ರಾಮಚಂದ್ರು), ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
7. ಶ್ರೀಮತಿ ಹೆಚ್.ಎನ್.ಗೌರಮ್ಮ, ಸದಸ್ಯರು, ಸಾಮಾನ್ಯ ಸ್ಥಾಯಿ ಸಮಿತಿ
8. ಮಾನ್ಯ ಅಧ್ಯಕ್ಷರು/ಮಾನ್ಯ ಉಪಾಧ್ಯಕ್ಷರು ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತ ಶಾಖೆಗೆ ಮಾಹಿತಿಗಾಗಿ
9. ಜಿಲ್ಲಾ ಪಂಚಾಯಿತಿ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮಾಹಿತಿಗಾಗಿ
10. ಮಾನ್ಯ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಆಪ್ತ ಶಾಖೆಗೆ
11. ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯಿತಿ, ಹಾಸನ.
12. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
13. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
14. ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
15. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ/ ಚನ್ನರಾಯಪಟ್ಟಣ
16. ಜಿಲ್ಲೆಯ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
17. ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
18. ಉಪ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯಗಳ ಇಲಾಖೆ, ಹಾಸನ.
19. ಕಛೇರಿ ಪ್ರತಿ.

**ದಿನ ೦ಕ: 09-11-2011ರಂದು ಪೂರ್ವಾಹ್ನ: 11-00ಗಂಟೆಗೆ ಉಪಾಧ್ಯಕ್ಷರ ಕೊಠಡಿ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

**ಅಧ್ಯಕ್ಷತೆ: ಶ್ರೀಮತಿ ಸುಲೋಚನಾ ರಾಮಕೃಷ್ಣ**

**ಅಧ್ಯಕ್ಷರು,**

**ಸಾಮಾನ್ಯ ಸ್ಥಾಯಿ ಸಮಿತಿ**

**ಹಾಜರಿ:05** | **ಗೈರು ಹಾಜರಿ:02**

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, , ಮುಖ್ಯ ಯೋಜನಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | ಹಾಸನ ಟೌನ್ ನಲ್ಲಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ (ಹೆಚ್ಚುವರಿ) ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8)ಕಬಾನಿ 121/2011-12 ದಿನಾಂಕ: 15-09-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2011-12ನೇ ಸಾಲಿನಲ್ಲಿ ಹಾಸನ ನಗರದಲ್ಲಿ ಹೆಚ್ಚುವರಿ ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯವು ಶ್ರೀಮತಿ ಸಂಧ್ಯಾರಾಣಿ ಕೋಂ ವೈ.ಎಲ್.ಸ್ವಾಮಿ, ಸಾಲಗಾಮೆ ರಸ್ತೆ, ಜಯನಗರ ಬಡಾವಣೆ, ಹಾಸನ ಇವರಿಗೆ ಸೇರಿದ ಕಟ್ಟಡದಲ್ಲಿ ದಿನಾಂಕ: 01-11-2010ರಿಂದ ಬಾಡಿಗೆ ಆಧಾರದ ಮೇಲೆ ನಡೆಯುತ್ತಿದ್ದು, ಸದರಿ ಕಟ್ಟಡವು ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡಿದ್ದು, ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ ರವರು ಮಾಹೆಯಾನ ಬಾಡಿಗೆ ರೂ.24,200/-ಗಳನ್ನು ನಿಗದಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ. ಕಟ್ಟಡದ ಮಾಲೀಕರಿಗೆ ದಿನಾಂಕ: 01-11-2010ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ, ಶ್ರೀಮತಿ ಸಂಧ್ಯಾರಾಣಿ ಕೋಂ ವೈ.ಎಲ್.ಸ್ವಾಮಿ, ಸಾಲಗಾಮೆ ರಸ್ತೆ, ಜಯನಗರ ಬಡಾವಣೆ, ಹಾಸನ ಇವರಿಗೆ ಸೇರಿದ ಕಟ್ಟಡದಲ್ಲಿ ನಡೆಯುತ್ತಿರುವ ಹೆಚ್ಚುವರಿ ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ದಿನಾಂಕ: 01-11-2010ರಿಂದ ಮಾಹೆಯಾನ ರೂ.24,200/- (ರೂಪಾಯಿ ಇಪ್ಪತ್ತನಾಲ್ಕು ಸಾವಿರದ ಎರಡು ನೂರು |

| | | | |
|---|---|---|---|
| | ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುತ್ತಾರೆ. | | ಮಾತ್ರ)ಗಳಂತೆ ಬಾಡಿಗೆಯನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 2 | ಹಾಸನ ಟೌನ್ ನಲ್ಲಿರುವ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ (ಹೆಚ್ಚುವರಿ) ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8)ಕಬಾನಿ 122/2011-12 ದಿನಾಂಕ: 15-09-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹಾಸನ ನಗರದಲ್ಲಿ ಹೆಚ್ಚುವರಿ ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವು ಶ್ರೀಮತಿ ಹೆಚ್.ಟಿ.ಶೋಭ ಬಿನ್ ಬಿ.ಟಿ. ತಿಮ್ಮಪ್ಪ, ಸರಸ್ವತಿ ಪುರಂ, ಸಾಲಗಾಮೆ ರಸ್ತೆ, ಹಾಸನ ಇವರಿಗೆ ಸೇರಿದ ಕಟ್ಟಡದಲ್ಲಿ ದಿನಾಂಕ: 01-11-2010ರಿಂದ ಬಾಡಿಕೆ ಆಧಾರದ ಮೇಲೆ ನಡೆಯುತ್ತಿದ್ದು, ಸದರಿ ಕಟ್ಟಡವು ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡಿದ್ದು, ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ ರವರು ಮಾಹೆಯಾನ ಬಾಡಿಗೆ ರೂ.17,200/-ಗಳನ್ನು ನಿಗದಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ. ಕಟ್ಟಡದ ಮಾಲೀಕರಿಗೆ ದಿನಾಂಕ: 01-11-2010ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ, ಶ್ರೀಮತಿ ಹೆಚ್.ಟಿ.ಶೋಭ ಬಿನ್ ಬಿ.ಟಿ.ತಿಮ್ಮಪ್ಪ, ಸರಸ್ವತಿ ಪುರಂ, ಸಾಲಗಾಮೆ ರಸ್ತೆ, ಹಾಸನ ಇವರಿಗೆ ಸೇರಿದ ಕಟ್ಟಡದಲ್ಲಿ ನಡೆಯುತ್ತಿರುವ ಹೆಚ್ಚುವರಿ ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ದಿನಾಂಕ: 01-11-2010ರಿಂದ ಮಾಹೆಯಾನ ರೂ.17,200/-(ರೂಪಾಯಿ ಹದಿನೇಳು ಸಾವಿರದ ಎರಡು ನೂರು ಮಾತ್ರ)ಗಳಂತೆ ಬಾಡಿಗೆಯನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 3 | ಬೇಲೂರು ಟೌನ್ ನ ಮೆಟ್ರಿಕ್ ನಂತರದ ಕಾಲೇಜು ಬಾಲಕರ ವಿದ್ಯಾರ್ಥಿನಿಲಯಕ್ಕೆ ಬಾಡಿಗೆ ಪಡೆದಿರುವ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಸಕಅ/ಡಿ5/ಸಿ.ಆರ್ /11/2010-11 ದಿನಾಂಕ: 05-08-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ದಿನಾಂಕ: 04-10-2010ರಂದು ಬೇಲೂರು ಟೌನ್ ನಲ್ಲಿ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಗೆ ಬಾಡಿಗೆ ಪಡೆಯಲಾಗಿದ್ದ ಶ್ರೀ ಹುಚ್ಚಪ್ಪ ಬಿನ್ ಲೇಟ್ ನಂಜೇಗೌಡ, ಪಂಪ್ ಹೌಸ್ ರೋಡ್, ಬೇಲೂರು ಇವರಿಗೆ ಸೇರಿದ ಕಟ್ಟಡವನ್ನು ಕಾರಣಾಂತರದಿಂದ ಮೆಟ್ರಿಕ್ ನಂತರದ ಕಾಲೇಜು ಬಾಲಕರ ವಿದ್ಯಾರ್ಥಿನಿಲಯಕ್ಕೆ ಸ್ಥಳಾಂತರಿಸಿರುತ್ತದೆ. ಆದ ಕಾರಣ, ಜಿಲ್ಲಾ ಪಂಚಾಯಿತಿಯಿಂದ ನಿಗದಿಪಡಿಸುವ ಬಾಡಿಗೆಯನ್ನು ಪಡೆಯಲು ಮಾಲೀಕರು ಒಪ್ಪಿ ಕರಾರು ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಕಟ್ಟಡವು ಉತ್ತಮ ನೀರಿನ ಸೌಲಭ್ಯ, ವಿದ್ಯುತ್ ಸೌಲಭ್ಯ ಹಾಗೂ ಗಾಳಿ ಬೆಳಕಿನ ಸೌಲಭ್ಯಗಳನ್ನು ಹೊಂದಿದ್ದು, 2 ಶಾಲಾ ಕೊಠಡಿ, ವಸತಿ ಕೊಠಡಿ4, ಅಡುಗೆ ಕೋಣೆ 1, ಸ್ನಾನದ ಗೃಹ 5, ಶೌಚಾಲಯ 6 ಹೊಂದಿದ್ದು, ವಿದ್ಯಾರ್ಥಿನಿಲಯಕ್ಕೆ ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುತ್ತದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರು ಕೋರಿರುವಂತೆ ಶ್ರೀ ಹುಚ್ಚಪ್ಪ ಬಿನ್ ಲೇಟ್ ನಂಜೇಗೌಡ, ಪಂಪ್ ಹೌಸ್ ರೋಡ್, ಬೇಲೂರು ಇವರಿಗೆ ಸೇರಿದ ಕಟ್ಟಡದಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ದಿನಾಂಕ: 04-10-2010ರಿಂದ ಮಾಹೆಯಾನ ರೂ.19,100/-(ರೂಪಾಯಿ ಹತ್ತೊಂಬತ್ತು ಸಾವಿರದ ಒಂದು ನೂರು ಮಾತ್ರ)ಗಳಂತೆ ಬಾಡಿಗೆಯನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | | |
|---|---|---|---|
| | | ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ರವರು ಸದರಿ ಕಟ್ಟಡಕ್ಕೆ ಮಾಹೆಯಾನ ರೂ.19,100/ಗಳಂತೆ ನಮೂನೆ-10ರಲ್ಲಿ ಶಿಫಾರಸ್ಸು ಮಾಡಿದ್ದು, ಸದರಿ ಬಾಡಿಗೆಯನ್ನು ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಯವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | |
| 4 | ಸಕಲೇಶಪುರ ತಾಲ್ಲೂಕಿನ ಬಾಗೆ ಅರಸುನಗರದಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅ(8)ಕಬಾನಿ 38/2011-12 ದಿನಾಂಕ: 29-08-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಸಕಲೇಶಪುರ ತಾಲ್ಲೂಕಿನ ಬಾಗೆ ಅರಸುನಗರದಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ದಿನಾಂಕ: 12-07-2010ರಿಂದ ಶ್ರೀ ಮುನಿಸ್ವಾಮಿ ಬಿನ್ ಅಮಾಸಯ್ಯ, ಬಾಗೆ ಇವರಿಗೆ ಸೇರಿದ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ಪ್ರಾರಂಭಿಸಲಾಗಿದ್ದು, ಸದರಿ ಕಟ್ಟಡವು ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡಿದ್ದು, ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನರವರು ಮಾಹೆಯಾನ ಬಾಡಿಗೆ ರೂ.17,800/-ಗಳನ್ನು ನಮೂನೆ-10ರಲ್ಲಿ ನಿಗದಿಪಡಿಸಿ ಶಿಫಾರಸ್ಸು ಮಾಡಿರುತ್ತಾರೆ. ಕಟ್ಟಡದ ಮಾಲೀಕರಿಗೆ ದಿನಾಂಕ: 12-07-2010ರಿಂದ ಬಾಡಿಗೆಯನ್ನು ಪಾವತಿಸಬೇಕಾಗಿರುವುದರಿಂದ, ಸದರಿ ಕಟ್ಟಡಕ್ಕೆ ಬಾಡಿಗೆಯನ್ನು ನಿಗದಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರು ಕೋರಿರುವಂತೆ, ಸಕಲೇಶಪುರ ತಾಲ್ಲೂಕಿನ ಬಾಗೆ ಅರಸುನಗರದಲ್ಲಿ ಶ್ರೀ ಮುನಿಸ್ವಾಮಿ ಬಿನ್ ಅಮಾಸಯ್ಯ ಇವರಿಗೆ ಸೇರಿದ ಕಟ್ಟಡದಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ದಿನಾಂಕ: 12-07-2010ರಿಂದ ಮಾಹೆಯಾನ ರೂ.17,800/- (ರೂಪಾಯಿ ಹದಿನೇಳು ಸಾವಿರದ ಎಂಟು ನೂರು ಮಾತ್ರ)ಗಳಂತೆ ಬಾಡಿಗೆಯನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 5 | 2008-09ನೇ ಸಾಲಿನಲ್ಲಿ ರಾಜ್ಯವಲಯ ಕಾರ್ಯಕ್ರಮದಡಿ ಮಂಜೂರಾಗಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಅರಕಲಗೂಡು ಈ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವ ಕುರಿತು. | ಟಿಪ್ಪಣಿ ಸಂಖ್ಯೆ: ಬಿಸಿಎಂ04/ಕಬಾನಿ/ಸಿ.ಆರ್-4/2011-12 ದಿನಾಂಕ: 12-08-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2008-09ನೇ ಸಾಲಿಗೆ ಅರಕಲಗೂಡು ಟೌನ್ ಗೆ ರಾಜ್ಯ ವಲಯ ಕಾರ್ಯಕ್ರಮದಡಿ ಹೊಸದಾಗಿ 50 ಸಂಖ್ಯಾಬಲದ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಮಂಜೂರಾಗಿರುತ್ತದೆ. ಸದರಿ ವಿದ್ಯಾರ್ಥಿನಿಲಯವನ್ನು ಮುಂದುವರೆಸಿಕೊಂಡು ಹೋಗಲು ಸ್ವಂತ ಕಟ್ಟಡವಿಲ್ಲದ ಕಾರಣ, ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಶ್ರೀಮತಿ ಜಯಲಕ್ಷ್ಮಿ ಕೋಂ ಶಿವರಾಂ, ಬಸವನಗುಡಿ ಬೀದಿ, ಅರಕಲಗೂಡು ಟೌನ್ ಇವರ ಒಡೆತನದಲ್ಲಿರುವ ಕಟ್ಟಡವನ್ನು ಸರ್ಕಾರ ನಿಗದಿಪಡಿಸುವ ಬಾಡಿಗೆಯನ್ನು ಪಡೆಯುವ ಷರತ್ತಿನಂತೆ ಸೂಕ್ತ ಮುಚ್ಚಳಿಗೆ ಪತ್ರವನ್ನು ಬರೆಯಿಸಿಕೊಂಡು | ಸಭೆಯಲ್ಲಿ ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ, ಅರಕಲಗೂಡು ಟೌನ್ ನಲ್ಲಿ ಶ್ರೀಮತಿ ಜಯಲಕ್ಷ್ಮಿ ಕೋಂ ಶಿವರಾಂ, ಬಸವನಗುಡಿ ಬೀದಿ, ಅರಕಲಗೂಡು ಇವರ ಒಡೆತನದ ಕಟ್ಟಡದಲ್ಲಿ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ದಿನಾಂಕ: 01-10-2010ರಿಂದ |

| | | | |
|---|---|---|---|
| | | ದಿನಾಂಕ: 01-10-2010ರಿಂದ ಇಲಾಖಾ ವಶಕ್ಕೆ ಪಡೆದುಕೊಂಡು ವಿದ್ಯಾರ್ಥಿನಿಲಯವನ್ನು ನಡೆಸಲಾಗುತ್ತಿದೆ. ಕಟ್ಟಡದ ನೆಲ ಅಂತಸ್ತು-702.45 ಚ.ಅಡಿ, ಮೊದಲನೇ ಅಂತಸ್ತು -702.45 ಚ.ಅಡಿ ಹಾಗೂ ಮೂರನೇ ಅಂತಸ್ತು-165.98 ಚ. ಅಡಿ ಇದ್ದು, ಸದರಿ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆ ಹಾಸನ ಇವರು ಮಾಹೆಯಾನ ರೂ.15,800.00ಗಳ ಬಾಡಿಗೆ ನಿಗದಿಪಡಿಸಿದ್ದು, ಕಟ್ಟಡಕ್ಕೆ ದಿನಾಂಕ: 01-10-2010ರಿಂದ ಮಾಹೆಯಾನಬಾಡಿಗೆಯನ್ನು ಪಾವತಿಸಲು ಅನುಮತಿ ಕೋರಿ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಮಾಹೆಯಾನ ರೂ.15,800/-(ರೂಪಾಯಿ ಹದಿನೈದು ಸಾವಿರದ ಎಂಟುನೂರು ಮಾತ್ರ)ಗಳಂತೆ ಬಾಡಿಗೆಯನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| **6. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | | |
| 1 | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಉಪ ವಿಭಾಗ, ಹಾಸನ ಇಲ್ಲಿಯ ಕಛೇರಿ ಕೆಲಸಕ್ಕೆ ಅವಶ್ಯವಿರುವ ಪೀಠೋಪಕರಣ, ಕಂಪ್ಯೂಟರ್ ಹಾಗೂ ಇತರೆ ಸಾಮಗ್ರಿ ಖರೀದಿ ಕುರಿತು. | ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ಮಾತನಾಡುತ್ತಾ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಉಪ ವಿಭಾಗದ ಕಛೇರಿಗಳಿಗೆ ಪೀಠೋಪಕರಣಗಳು ಮತ್ತು ಕಂಪ್ಯೂಟರ್, ಪ್ರಿಂಟರ್, ಲ್ಯಾಪ್ ಟ್ಯಾಪ್, ಯು.ಪಿ.ಎಸ್ ಹಾಗೂ ಸ್ಕ್ಯಾನಿಂಗ್ ಮಿಷನಗಳನ್ನು ಪಾರದರ್ಶಕ ನಿಯಮಗಳು ಮತ್ತು ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ ಖರೀದಿಸಲು ಅನುಮತಿ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ಕೋರಿರುವಂತೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಉಪ ವಿಭಾಗದ ಕಛೇರಿಗಳಿಗೆ ಅವಶ್ಯವಿರುವ ಪೀಠೋಪಕರಣಗಳು ಮತ್ತು ಕಂಪ್ಯೂಟರ್, ಪ್ರಿಂಟರ್, ಲ್ಯಾಪ್ ಟ್ಯಾಪ್, ಯು.ಪಿ.ಎಸ್ ಹಾಗೂ ಸ್ಕ್ಯಾನಿಂಗ್ ಮಿಷನಗಳನ್ನು ಪಾರದರ್ಶಕ ನಿಯಮಗಳಡಿ ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ ಖರೀದಿಸಲು ಅನುಮತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 2 | 2011-12ನೇ ಸಾಲಿನ ವಿವಿದ ಇಲಾಖಾ ಕಾರ್ಯಕ್ರಮಗಳ ಕ್ರಿಯಾ ಯೋಜನೆ ಅನುಮೋದನೆ ಬಗ್ಗೆ. | ಜಿಲ್ಲಾ ಆಯುಷ್ ಅಧಿಕಾರಿ, ಆಯುಷ್ ಇಲಾಖೆ, ಹಾಸನ ಇವರು ತಮ್ಮ ಪತ್ರ ಸಂಖ್ಯೆ: ಜಿ.ಆ.ಅ.ಹಾ.ಸಿ:(1)ಕ್ರಿಯೋ:10:2011-12 ದಿನಾಂಕ: 15-09-2011ರಲ್ಲಿ 2011-12ನೇ ಸಾಲಿನ ವಿವಿಧ ಇಲಾಖಾ ಕಾರ್ಯಕ್ರಮಗಳ ಕ್ರಿಯಾ ಯೋಜನೆಯಡಿಯಲ್ಲಿ ಲೆಕ್ಕಶೀರ್ಷಿಕೆ 2210-00-105-0-38 (ಕಟ್ಟಡಗಳು ) ಅಡಿಯಲ್ಲಿ ರೂ.15.00ಲಕ್ಷಗಳು ನಿಗದಿಯಾಗಿದ್ದು, ಈ ಮೊತ್ತದಲ್ಲಿ ಇಲಾಖೆಯ ವಿವಿದ ಕಟ್ಟಡಗಳ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿ, ಆಯುಷ್ ಇಲಾಖೆ, ಹಾಸನ ಇವರು ಕೋರಿರುವಂತೆ, ಕೆಳಕಂಡ ಕಾಮಗಾರಿಗಳನ್ನು ತಿದ್ದುಪಡಿ ಮಾಡಲು ಸಭೆಯಲ್ಲಿ |

<table>
<tr>
<td></td>
<td></td>
<td>ನಿರ್ಮಾಣ ಹಾಗೂ ದುರಸ್ಥಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಕ್ರಿಯಾ ಯೋಜನೆ ತಯಾರಿಸಿ ತಮಗೆ ಸಲ್ಲಿಸಲಾಗಿತ್ತು. ಈ ಸಂಬಂಧ ಜಿಲ್ಲಾ ಪಂಚಾಯಿತಿಯಿಂದ ಕ್ರಿಯಾ ಯೋಜನೆಗೆ ಅನುಮೋದನೆ ದೊರಕಿದ್ದು, ಈ ಕ್ರಿಯಾ ಯೋಜನೆಯಲ್ಲಿ ಆಯುಷ್ ಇಲಾಖೆಗೆ ಸೇರಿರದ ಹಲವು ಕಟ್ಟಡಗಳು ಸೇರ್ಪಡೆಗೊಂಡಿರುತ್ತವೆ. ಇವುಗಳಲ್ಲಿ ಕ್ರ.ಸಂ.1ರ ಅರಕಲಗೂಡು ಟೌನ್ ಆಯುರ್ವೇದ ಕೇಂದ್ರ . ಅರಕಲಗೂಡು ಟೌನ್ ನಲ್ಲಿ ಈ ಇಲಾಖೆಗೆ ಸಂಬಂಧಿಸಿದ ಯಾವುದೇ ಸ್ಥಳ ಲಭ್ಯವಿರುವುದಿಲ್ಲವಾದ್ದರಿಂದ, ಹಿಂದೆ ಅರಕಲಗೂಡು ತಾ: ಅಬ್ಬೂರು ಮಾಚಗೋಡನಹಳ್ಳಿ ಇಲ್ಲಿಗೆ ಕಟ್ಟಡ ನಿರ್ಮಾಣ ಮಾಡಲು ಕೋರಲಾಗಿತ್ತು. ಆದ್ದರಿಂದ, ಇದನ್ನು ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಅಬ್ಬೂರು ಮಾಚಗೋಡನಹಳ್ಳಿ, ಅರಕಲಗೂಡು ತಾ; ಎಂದು ತಿದ್ದುಪಡಿ ಮಾಡಿಕೊಳ್ಳಬೇಕಾಗಿ ಮತ್ತು ಕ್ರಮ ಸಂ: 4ರಲ್ಲಿ ಹಾಸನ ತಾ: ಹೂವಿನಹಳ್ಳಿಕಾವಲು, ಆಯುಷ್ ಆರೋಗ್ಯ ಕಟ್ಟಡ ದುರಸ್ಥಿ ಎಂದು ನಮೂದಾಗಿರುತ್ತದೆ. ಆದರೆ, ಈ ಸ್ಥಳದಲ್ಲಿ ಆಯುಷ್ ಇಲಾಖೆಗೆ ಸಂಬಂಧಿಸಿದ ಯಾವುದೇ ಆಸ್ಪತ್ರೆ ಅಥವಾ ಕಟ್ಟಡವಾಗಲೀ ಇರುವುದಿಲ್ಲ. ಆದ್ದರಿಂದ, ಈ ಕಟ್ಟಡಕ್ಕೆ ನಿಗದಿಪಡಿಸಿರುವ ಮೊತ್ತವನ್ನು ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕಾರ್ಜುವಳ್ಳಿ, ಆಲೂರು ತಾ: ಇಲ್ಲಿನ ಆಯುಷ್ ಕಟ್ಟಡ ದುರಸ್ಥಿಗೆ ತಿದ್ದುಪಡಿ ಮಾಡಿಕೊಡಬೇಕೆಂದು ಕೋರಿರುತ್ತಾರೆ.</td>
<td>ಸರ್ವಾನುಮತದಿಂದ ನಿರ್ಣಯಿಸಲಾಯಿತು.
<table>
<tr><th>ಕ್ರ ಸಂ</th><th>ಕ್ರಿಯಾ ಯೋಜನೆಯಲ್ಲಿರುವ ಕಾಮಗಾರಿಗಳು</th><th>ಕ್ರ ಸಂ</th><th>ಬದಲಾವಣೆ ಮಾಡಿ ಅನುಮೋದಿಸಿರುವ ಕಾಮಗಾರಿಗಳು</th></tr>
<tr><td>1</td><td>ಅರಕಲಗೂಡು ಟೌನ್ ಆಯುರ್ವೇದ ಕೇಂದ್ರ ಅಂದಾಜು ಮೊತ್ತ ರೂ.5.00</td><td>1</td><td>ಅರಕಲಗೂಡು ತಾ: ಅಬ್ಬೂರು ಮಾಚಗೋಡನಹಳ್ಳಿ ಆಯುರ್ವೇದ ಕೇಂದ್ರ ಕಟ್ಟಡ ನಿರ್ಮಾಣ ಅಂದಾಜು ಮೊತ್ತ ರೂ.5.00ಲಕ್ಷ</td></tr>
<tr><td>2</td><td>ಹಾಸನ ತಾ: ಹೂವಿನ ಹಳ್ಳಿ ಕಾವಲು ಆಯುಷ್ ಆರೋಗ್ಯ ಕಟ್ಟಡ ದುರಸ್ತಿ ಅಂದಾಜು ಮೊತ್ತ ರೂ.0.75ಲಕ್ಷ</td><td>2</td><td>ಆಲೂರು ತಾ: ಕಾರ್ಜುವಳ್ಳಿ ಆಯುಷ್ ಆಸ್ಪತ್ರೆ ಕಟ್ಟಡ ದುರಸ್ಥಿ ಅಂದಾಜು ಮೊತ್ತ ರೂ.0.75ಲಕ್ಷ</td></tr>
</table>
</td>
</tr>
<tr>
<td>3</td>
<td>ವಿವಿಧ ಯೋಜನೆಗಳ ಕಾಮಗಾರಿ ಬದಲಾವಣೆ ಬಗ್ಗೆ.</td>
<td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋವಿ(3)ಕಾ.ಬದಲಾವಣೆ/23/2011-12ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2011-12ನೇ ಸಾಲಿನಲ್ಲಿ ಅನುಮೋದನೆಗೊಂಡ ವಿವಿಧ ಯೋಜನೆಗಳ ಕೆಲವು ಕಾಮಗಾರಿಗಳು ತುರ್ತು ಅವಶ್ಯಕತೆ ಇಲ್ಲದಿರುವ ಕಾರಣ ಹಾಗೂ ಸದರಿ ಕಾಮಗಾರಿಗಳು ಬೇರೆ ಯೋಜನೆಗಳಲ್ಲಿ ಸೇರಿರುವುದರಿಂದ, ಅನುಮೋದನೆಯಾಗಿರುವ ಕಾಮಗಾರಿಗಳನ್ನು ಬದಲಾವಣೆ ಮಾಡಿಕೊಡುವಂತೆ ಶ್ರೀ ಎಂ.ಕೆ.ದ್ಯಾವಯ್ಯ, ಮಾನ್ಯ ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ, ಶ್ರೀಮತಿ ಮಂಜುಳ ಭೈರಾಜು, ಮಾನ್ಯ ಸದಸ್ಯರು ಹಾಗೂ ಶ್ರೀಮತಿ ಜ್ಯೋತಿ ವಿ.ಪಿ ಇವರುಗಳು ಮನವಿ ಸಲ್ಲಿಸಿದ್ದು, ಮನವಿಗಳಲ್ಲಿ ಕೋರಲಾದಂತೆ, ಕಾಮಗಾರಿಗಳನ್ನು ಬದಲಾವಣೆ ಮಾಡುವ ಕುರಿತು ವಿಷಯವನ್ನು ಸ್ಥಾಯಿ ಸಮಿತಿ ಸಭೆಗೆ ಮುಖ್ಯ ಯೋಜನಾಧಿಕಾರಿಯವರು ಮಂಡಿಸಿದರು.</td>
<td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಶ್ರೀ ಎಂ.ಕೆ.ದ್ಯಾವಯ್ಯ, ಮಾನ್ಯ ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ, ಶ್ರೀಮತಿ ಮಂಜುಳ ಭೈರಾಜು, ಹಾಗೂ ಶ್ರೀಮತಿ ಜ್ಯೋತಿ ವಿ.ಪಿ ಜಿಲ್ಲಾ ಪಂಚಾಯತ್ ಸದಸ್ಯರುಗಳು ಕೋರಿರುವ 2011-12ನೇ ಸಾಲಿನಲ್ಲಿ ಅನುಮೋದನೆಗೊಂಡ ವಿವಿಧ ಯೋಜನೆಗಳ ಕಾಮಗಾರಿಗಳನ್ನು ಬದಲಾವಣೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.</td>
</tr>
</table>

| | | | |
|---|---|---|---|
| | ಯೋಜನಾ ಶಾಖೆಗೆ ಕಾಪಿಯರ್ ಯಂತ್ರವನ್ನು ಖರೀದಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋ.ವಿ/ /2011-12 ದಿನಾಂಕ: 03-11-2011ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಯೋಜನಾ ಶಾಖೆ, ಹಾಸನ ಜಿಲ್ಲಾ ಪಂಚಾಯತ್ ಇಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳಲ್ಲಿ ಅನುಷ್ಠಾನ ಮಾಡುವ ವಿವಿಧ ಯೋಜನೆಗಳ ಕ್ರಿಯಾ ಯೋಜನೆಗಳು, ವಸತಿ ಯೋಜನೆ, ಸಂಪೂರ್ಣ ಸ್ವಚ್ಚತಾ ಆಂದೋಲನಾ ಕಾರ್ಯಕ್ರಮ, ಮಾಸಿಕ ಕೆ.ಡಿ.ಪಿ, ತ್ರೈಮಾಸಿಕ ಕೆ.ಡಿ.ಪಿ ಸಭೆ ಮತ್ತು ಇತರೆ ಸಭೆಗಳಿಗೆ ಅವಶ್ಯ ಬುಕ್ ಲೆಟ್ ಗಳನ್ನು ಆಗಿಂದ್ದಾಗ್ಗೆ ಸಿದ್ದಪಡಿಸಬೇಕಾಗಿರುತ್ತದೆ. ಆದ್ದರಿಂದ, ಯೋಜನಾ ಶಾಖೆಗೆ Minimum copying speed (cpm):25,paper size(Originally Image) A3/A3, RAM(MB):64 Bye Pass:50 SHEET, Zoom:50To 200%, Category: Duplex ದರ ರೂ.1,23,,576.00(ರೂಪಾಯಿ ಒಂದು ಲಕ್ಷದ ಇಪ್ಪತ್ತಮೂರು ಸಾವಿರದ ಐದುನೂರ ಎಪ್ಪತ್ತಾರು ಮಾತ್ರ)ಗಳು ಹಾಗೂ 12.5 % ತೆರಿಗೆ ಪ್ರತ್ಯೇಕ ಅಂದಾಜಿನಲ್ಲಿ ಡಿ.ಜಿ.ಎಸ್ ಅಂಡ್ ಡಿ ದರದಲ್ಲಿ RISO Company Machine ಅನ್ನು ಲೆಕ್ಕಶೀರ್ಷಿಕೆ -3451 (ಜಿಲ್ಲಾ ಯೋಜನಾ ಸಮಿತಿ) ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ಅನುಮೋದನೆ ನೀಡುವ ಬಗ್ಗೆ ವಿಷಯವನ್ನು ಸ್ಥಾಯಿ ಸಮಿತಿ ಸಭೆಗೆ ಮಂಡಿಸಿದೆ. | ಸಭೆಯಲ್ಲಿ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.<br>ಯೋಜನಾ ಶಾಖೆ, ಜಿಲ್ಲಾ ಪಂಚಾಯತ್, ಹಾಸನ ಇಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ವಿವಿಧ ಇಲಾಖೆಗಳಲ್ಲಿ ಅನುಷ್ಠಾನ ಮಾಡುವ ವಿವಿಧ ಯೋಜನೆಗಳ ಕ್ರಿಯಾ ಯೋಜನೆಗಳು, ವಸತಿ ಯೋಜನೆ, ಸಂಪೂರ್ಣ ಸ್ವಚ್ಚತಾ ಆಂದೋಲನಾ ಕಾರ್ಯಕ್ರಮ, ಮಾಸಿಕ ಕೆ.ಡಿ.ಪಿ, ತ್ರೈಮಾಸಿಕ ಕೆ.ಡಿ.ಪಿ ಸಭೆ ಮತ್ತು ಇತರೆ ಸಭೆಗಳಿಗೆ ಅವಶ್ಯ ಬುಕ್ ಲೆಟ್ ಗಳನ್ನು ಸಿದ್ದಪಡಿಸಲು ಅನುಕೂಲವಾಗುವಂತೆ Minimum copying speed (cpm):25,paper size(Originally Image) A3/A3, RAM(MB):64 Bye Pass:50 SHEET, Zoom:50To 200%, Category: Duplex ದರ ರೂ.1,23,,576.00 (ರೂಪಾಯಿ ಒಂದು ಲಕ್ಷದ ಇಪ್ಪತ್ತಮೂರು ಸಾವಿರದ ಐದುನೂರ ಎಪ್ಪತ್ತಾರು ಮಾತ್ರ)ಗಳು ಹಾಗೂ 12.5 % ತೆರಿಗೆ ಪ್ರತ್ಯೇಕ ಅಂದಾಜಿನಲ್ಲಿ ಡಿ.ಜಿ.ಎಸ್ ಅಂಡ್ ಡಿ ದರಲ್ಲಿ RISO Company Machine ಅನ್ನು ಲೆಕ್ಕಶೀರ್ಷಿಕೆ -3451 (ಜಿಲ್ಲಾ ಯೋಜನಾ ಸಮಿತಿ) ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 5 | 2012ನೇ ಇಸವಿಯ ಡೈರಿಗಳನ್ನು ಮುದ್ರಿಸುವ ಬಗ್ಗೆ | ಉಪ ಕಾರ್ಯದರ್ಶಿ (ಆಡಳಿತ)ರವರು ಮಾತನಾಡುತ್ತಾ, 2012ನೇ ಇಸವಿಯ ಜಿಲ್ಲಾ ಪಂಚಾಯತ್ ಹಾಸನದ ಡೈರಿಗಳನ್ನು ಮುದ್ರಿಸಿ 2012 ಜನವರಿ ಮಾಹೆಯಲ್ಲಿಯೇ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖಾಧಿಕಾರಿಗಳಿಗೆ ವಿತರಣೆ ಮಾಡಬೇಕಾಗಿರುತ್ತದೆ. ಆದ್ದರಿಂದ, 2012ನೇ ಇಸವಿಯ ಡೈರಿಗಳನ್ನು ನಿಯಮಾನುಸಾರ ಮುದ್ರಿಸಿ ವಿತರಣೆ ಮಾಡಲು ಸಭೆಯು ಅನುಮತಿ ನೀಡುಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2012ನೇ ಇಸವಿಯ ಡೈರಿಗಳನ್ನು ನಿಯಮಾನುಸಾರ ಮುದ್ರಿಸಿ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖಾಧಿಕಾರಿಗಳಿಗೆ ವಿತರಣೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

| | | | |
|---|---|---|---|
| | 2010-11ನೇ ಸಾಲಿನ ವಾರ್ಷಿಕ ಆಡಳಿತ ವರದಿಯ ಪುಸ್ತಕಗಳನ್ನು ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸಲು ಅನುಮತಿ ನೀಡುವ ಬಗ್ಗೆ. | ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಹಾಸನ ಜಿಲ್ಲಾ ಪಂಚಾಯಿತಿಯ 2010-11ನೇ ಸಾಲಿನ ವಾರ್ಷಿಕ ಆಡಳಿತ ವರದಿಯ ಪುಸ್ತಕಗಳನ್ನು ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ, 2010-11ನೇ ಸಾಲಿನ ಹಾಸನ ಜಿಲ್ಲಾ ಪಂಚಾಯಿತಿಯ ವಾರ್ಷಿಕ ಆಡಳಿತ ವರದಿಯ ಪುಸ್ತಕಗಳನ್ನು ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸಲು ಅನುಮತಿ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ಜಿಲ್ಲಾ ಪಂಚಾಯಿತಿಯ 2010-11ನೇ ಸಾಲಿನ ವಾರ್ಷಿಕ ಆಡಳಿತ ವರದಿಯ ಪುಸ್ತಕಗಳನ್ನು ನಿಯಮಾನುಸಾರ ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು |
| 7 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸಿಂಗಾಪುರ ಈ ನಿಲಯದ ಕಟ್ಟಡದ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ. | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ತಮ್ಮ ಪತ್ರ ಸಂಖ್ಯೆ: ಬಿ.ಸಿ.ಎ04/ಕ.ಬಾನಿ/ಸಿಆರ್-58/2011-12 ದಿನಾಂಕ: 3-11-2011ದಲ್ಲಿ ಹೊಳೆನರಸೀಪುರ ತಾ: ಸಿಂಗಾಪುರ ಗ್ರಾಮಕ್ಕೆ ಮಂಜೂರಾಗಿರುವ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು ಶ್ರೀಮತಿ ಕಾಳಮ್ಮ ಕೋಂ ಲೇಟ್ ತಿಮ್ಮೇಗೌಡ, ಸಿಂಗಾಪುರ ಇವರ ಒಡೆತನದ ಕಟ್ಟಡವನ್ನು ಬಾಡಿಗೆ ಆಧಾರದ ಮೇಲೆ ಪಡೆದು ನಡೆಸಲಾಗುತ್ತಿದ್ದು, ಸದರಿ ಕಟ್ಟಡಕ್ಕೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ಇವರು ಮಾಹೆಯಾನ ರೂ.7000/-ಗಳಂತೆ ಬಾಡಿಗೆಯನ್ನು ಶಿಫಾರಸ್ಸು ಮಾಡಿರುತ್ತಾರೆ. ಆದ್ದರಿಂದ, ಸದರಿ ಕಟ್ಟಡಕ್ಕೆ ದಿನಾಂಕ: 01-11-2007ರಿಂದ ಬಾಡಿಗೆಯನ್ನು ಪಾವತಿಸಲು ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ ಹೊಳೆನರಸೀಪುರ ತಾ: ಸಿಂಗಾಪುರ ಗ್ರಾಮದಲ್ಲಿ ಶ್ರೀಮತಿ ಕಾಳಮ್ಮ ಕೋಂ ಲೇಟ್ ತಿಮ್ಮೇಗೌಡ ಇವರ ಒಡೆತನದ ಕಟ್ಟಡದಲ್ಲಿ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ.7000/- ( ರೂಪಾಯಿ ಏಳು ಸಾವಿರ ಮಾತ್ರ) ಗಳಂತೆ ಬಾಡಿಗೆಯನ್ನು ದಿನಾಂಕ: 01-11-2007ರಿಂದ ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 8 | 2008-09ನೇ ಸಾಲಿನಲ್ಲಿ ಹಾಸನ ನಗರದಲ್ಲಿ ಹೆಚ್ಚುವರಿ ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕ/ ಬಾಲಕಿಯರ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಬಾಡಿಗೆಗೆ ಪಡೆದಿರುವ ಬಾಡಿಗೆ ಕಟ್ಟಡಗಳಿಗೆ ಬಾಡಿಗೆ ಸಂದಾಯ ಮಾಡುತ್ತಿರು ವುದಕ್ಕೆ ಘಟನೋತ್ತರ ಮಂಜೂರಾತಿ | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ತಮ್ಮ ಪತ್ರ ಸಂಖ್ಯೆ: ಬಿಸಿಎಂ-4/ಕಬಾನಿ/ಸಿ.ಆರ್-90/2008-09 ದಿನಾಂಕ: 01-02-2011ರಲ್ಲಿ 2008-09ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಅನುಮೋದನೆ ಮೇರೆಗೆ ಹಾಸನ ನಗರದಲ್ಲಿ 50 ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಶ್ರೀಮತಿ ಗಿಡ್ಡಮ್ಮ ಕೋಂ ರಾಮೇಗೌಡ, ಬಾಗಡೇರಕೊಪ್ಪಲು, ಹಾಸನ ಇವರ ಮಾಲೀಕತ್ವದ ಕಟ್ಟಡವನ್ನು ಬಾಡಿಗೆ ಆಧಾರದ ಮೇಲೆ ಪಡೆದಿದ್ದು, ಸದರಿಯವರಿಗೆ ದಿನಾಂಕ: 01-11-2008ರಿಂದ ಲೋಕೋಪಯೋಗಿ ಇಲಾಖೆಯವರು ನಿಗದಿಪಡಿಸಿದಂತೆ ಮಾಹೆಯಾನ ರೂ.31000/-(ರೂಪಾಯಿ ಮೂವತ್ತೊಂದು ಸಾವಿರ ಮಾತ್ರ)ಗಳಂತೆ ಬಾಡಿಗೆಯನ್ನು ಹಾಗೂ 50 ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕಿಯರ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು ಕೋರಿರುವಂತೆ, 2008-09ನೇ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿ ಅನುಮೋದನೆ ಮೇರೆಗೆ ಹಾಸನ ನಗರದಲ್ಲಿ 50 ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಕ್ಕೆ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಶ್ರೀಮತಿ ಗಿಡ್ಡಮ್ಮ ಕೋಂ ರಾಮೇಗೌಡ, |

| | | | |
|---|---|---|---|
| | ನೀಡುವ ಕುರಿತು. | ವಿದ್ಯಾರ್ಥಿನಿಲಯಕ್ಕೆ ಶ್ರೀಮತಿ ಗಂಗಮ್ಮ ಕೋಂ ಸೋಮಶೇಖರಪ್ಪ, ಉದಯಗಿರಿ ಬಡಾವಣೆ, ಹಾಸನ ಇವರ ಮಾಲೀಕತ್ವದ ಕಟ್ಟಡವನ್ನು ಬಾಡಿಗೆ ಆಧಾರದ ಮೇಲೆ ಪಡೆದಿದ್ದು, ಸದರಿ ಕಟ್ಟಡಕ್ಕೆ ದಿನಾಂಕ: 01-10-2008ರಿಂದ ಲೋಕೋಪಯೋಗಿ ಇಲಾಖೆಯವರು ನಿಗದಿಪಸಿದಂತೆ, ಮಾಹೆಯಾನ ರೂ.17000/-(ರೂಪಾಯಿ ಹದಿನೇಳು ಸಾವಿರ ಮಾತ್ರ)ಗಳ ಬಾಡಿಗೆಯನ್ನು ಪಾವತಿಸಲಾಗುತ್ತಿದ್ದು, ಘಟನೋತ್ತರ ಮಂಜೂರಾತಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಬಾಗಡೇರಕೊಪ್ಪಲು, ಹಾಸನ ಇವರ ಮಾಲೀಕತ್ವದ ಕಟ್ಟಡಕ್ಕೆ ದಿನಾಂಕ: 01-11-2008ರಿಂದ ಲೋಕೋಪಯೋಗಿ ಇಲಾಖೆಯವರು ನಿಗದಿಪಡಿಸಿದ ಮಾಹೆಯಾನ ರೂ.31000/-(ರೂಪಾಯಿ ಮೂವತ್ತೊಂದು ಸಾವಿರ ಮಾತ್ರ)ಗಳಂತೆ ಬಾಡಿಗೆಯನ್ನು ಪಾವತಿಸುತ್ತಿರುವುದಕ್ಕೆ ಮತ್ತು 50 ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಶ್ರೀಮತಿ ಗಂಗಮ್ಮ ಕೋಂ ಸೋಮಶೇಖರಪ್ಪ, ಉದಯಗಿರಿ ಬಡಾವಣೆ, ಹಾಸನ ಇವರ ಮಾಲೀಕತ್ವದ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆಯವರು ನಿಗದಿಪಡಿಸಿದ ಮಾಹೆಯಾನ ರೂ.17000/-(ರೂಪಾಯಿ ಹದಿನೇಳು ಸಾವಿರ ಮಾತ್ರ)ಗಳ ಬಾಡಿಗೆಯನ್ನು ದಿನಾಂಕ: 01-10-2008ರಿಂದ ಪಾವತಿಸುತ್ತಿರುವುದಕ್ಕೆ ಸಭೆಯಲ್ಲಿ ಸರ್ವಾನುಮತದಿಂದ ಘಟನೋತ್ತರ ಮಂಜೂರಾತಿ ನೀಡಲಾಯಿತು. |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

Sulochana

(ಸುಲೋಚನಾ ರಾಮಕೃಷ್ಣ)

ಅಧ್ಯಕ್ಷರು

ಸಾಮಾನ್ಯ ಸ್ಥಾಯಿ ಸಮಿತಿ

ಜಿಲ್ಲಾ ಪಂಚಾಯಿತಿ, ಹಾಸನ.